23	ರಾಯಚೂರು	42	4	46
24	ಕೊಪ್ಪಳ	95	6	101
25	ಬೀದರ್	82	23	105
26	ಬಳ್ಳಾರಿ	359	150	509
	ಒಟ್ಟು	**23327**	**12649**	**35976**

ದಾಳಿಂಬೆ ಬೆಳೆಗಳು

511 (634) ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ) : ಮಾನ್ಯ ತೋಟಗಾರಿಕೆ ಮತ್ತು ಬಂಧಿಖಾನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ದಾಳಿಂಬೆ ಬೆಳೆ ಬೆಳೆಯುವ ಜಿಲ್ಲೆಗಳು ಎಷ್ಟು ಹಾಗೂ ಯಾವುವು (ವಿವರ ನೀಡುವುದು);

ಆ) ಈ ದಾಳಿಂಬೆ ಬೆಳೆಗೆ ದುಂಡಾಣು ರೋಗವು ಹರಡಿರುವು ದರಿಂದ ರಾಜ್ಯದ ರೈತರಿಗೆ ಬಹಳ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ದುಂಡಾಣು ರೋಗವನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಈ) ಈ ರೋಗವನ್ನು ತಡೆಗಟ್ಟಲು ಕೇಂದ್ರ ಸರ್ಕಾರ ವಿಶೇಷ ಪ್ಯಾಕೇಜ್ ಘೋಷಣೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿರುವುದೇ;

ಉ) ಹಾಗಿದ್ದಲ್ಲಿ, ಈ ಯೋಜನೆಯು ಕರ್ನಾಟಕ ರಾಜ್ಯದಲ್ಲಿ ಜಾರಿಯಲ್ಲಿರುವುದೇ;

ಊ) ಹಾಗಿದ್ದಲ್ಲಿ, ಈ ರೋಗವನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಉಮೇಶ್ ವಿ. ಕತ್ತಿ (ತೋಟಗಾರಿಕೆ ಮತ್ತು ಬಂಧಿಖಾನೆ ಸಚಿವರು) :

ಅ) ಹದಿಮೂರು.

ಅವುಗಳ ವಿವರಗಳು ಕೆಳಗಿನಂತಿವೆ :

ಕ್ರ.ಸಂ.	ಜಿಲ್ಲೆ	ವಿಸ್ತೀರ್ಣ (ಹೆಕ್ಟೇರ್)
1	ಕೊಪ್ಪಳ	3580
2	ಬಳ್ಳಾರಿ	1340
3	ಬಾಗಲಕೋಟೆ	2196
4	ಬಿಜಾಪುರ	1336
5	ತುಮಕೂರು	1613
6	ಚಿತ್ರದುರ್ಗ	1644
7	ಬೆಳಗಾವಿ	377
8	ಗದಗ	213
9	ಬೀದರ್	58
10	ದಾವಣಗೆರೆ	119
11	ರಾಯಚೂರು	1259
12	ಗುಲ್ಬರ್ಗಾ	229
13	ಚಿಕ್ಕಬಳ್ಳಾಪುರ	76
	ಒಟ್ಟು	**14040**

ಆ) ಹೌದು.

ಇ) ಕೈಗೊಂಡ ಕ್ರಮಗಳು ಈ ಕೆಳಕಂಡಂತಿವೆ :

1. 2007–08 ಮತ್ತು 2008–09 ನೇ ಸಾಲುಗಳಲ್ಲಿ ರಾಷ್ಟ್ರೀಯ ತೋಟಗಾರಿಕೆ ಮಿಷನ್ (NHM) ಅಡಿಯಲ್ಲಿ ಹಾಗೂ 2009–10 ನೇ ಸಾಲಿನಲ್ಲಿ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಲ್ಲಿ ಬ್ಯಾಕ್ಟೀರಿಯ ಪೀಡಿತ ದಾಳಿಂಬೆ ತೋಟಗಳ ಪುನಃಶ್ಚೇತನಕ್ಕಾಗಿ Good Management Practices (GMP) ಕಾರ್ಯಕ್ರಮದಡಿ ಸಹಾಯಧನ ರೂ.25,000/– ಪ್ರತಿ ಹೆಕ್ಟೇರ್‌ರಂತೆ 4 ಹೆಕ್ಟೇರ್‌ವರೆಗೆ ದಾಳಿಂಬೆ ಬೆಳೆಗಾರರಿಗೆ ಈಗಾಗಲೇ ನೀಡಲಾಗಿರುತ್ತದೆ.

2. ರಾಜ್ಯದಲ್ಲಿ ಬ್ಯಾಕ್ಟೀರಿಯಲ್ ಬ್ಲೈಟ್ ರೋಗದ ತೀವ್ರತೆಯನ್ನು ನಿಯಂತ್ರಿಸುವ ಉದ್ದೇಶದಿಂದ, ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆ, ಹೆಸರಘಟ್ಟ, ಬೆಂಗಳೂರು ಹಾಗೂ ಕೃಷಿ ವಿಶ್ವವಿದ್ಯಾನಿಲಯ, ಧಾರವಾಡ, ರವರ ಮೂಲಕ ರಾಷ್ಟ್ರೀಯ ತೋಟಗಾರಿಕೆ ಮಿಷನ್ (NHM) ಅಡಿಯಲ್ಲಿ ನೆಟ್‌ವರ್ಕ್ ಪ್ರಾಜೆಕ್ಟ್ ಅನುಷ್ಠಾನಗೊಳಿಸಲಾಗುತ್ತಿದೆ. ಈ ಪ್ರಾಜೆಕ್ಟ್ ಅಡಿ ಪ್ರಾತ್ಯಕ್ಷತೆ, ಸಮೀಕ್ಷೆ ಹಾಗೂ ಕಣ್ಗಾವಲು, ರೋಗ ಮುನ್ಸೂಚನೆ ಘಟಕಗಳ ಸ್ಥಾಪನೆ, ರೈತರಿಗೆ ತರಬೇತಿ ಕಾರ್ಯಕ್ರಮಗಳನ್ನು ಕೈಗೊಳ್ಳಲು, ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆ, ಬೆಂಗಳೂರು, ರವರಿಗೆ ರೂ.32.86 ಲಕ್ಷಗಳನ್ನು ಹಾಗೂ ಕೃಷಿ ವಿಶ್ವವಿದ್ಯಾನಿಲಯ, ಧಾರವಾಡ, ರವರಿಗೆ ರೂ.47.74 ಲಕ್ಷಗಳನ್ನು ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ಬಿಡುಗಡೆ ಮಾಡಲಾಗಿದೆ.

3. ರಾಜ್ಯ ಸರ್ಕಾರದ ವತಿಯಿಂದ ದುಂಡಾಣು ರೋಗದ ಬಗ್ಗೆ ಹೆಚ್ಚಿನ ಸಂಶೋಧನೆ ಕೈಗೊಂಡು ನಿಯಂತ್ರಣಕ್ಕೆ ಪರಿಣಾಮಕಾರಿ ನಿವಾರಣೋಪಾಯಗಳನ್ನು ಕಂಡು ಹಿಡಿಯಲು ರೂ.91.25 ಲಕ್ಷಗಳನ್ನು 2007–08 ರಿಂದ 2009–10 ರವರೆಗೆ ಕೃಷಿ ವಿಶ್ವವಿದ್ಯಾನಿಲಯ, ಧಾರವಾಡ, ರವರಿಗೆ ನೀಡಲಾಗಿದೆ.

4. ಸಸ್ಯ ಸಂರಕ್ಷಣೆ ಔಷಧಿಗಳನ್ನು ಶೇ.50 ರ ರಿಯಾಯಿತಿ ದರದಲ್ಲಿ ರೈತರಿಗೆ ವಿತರಿಸಲಾಗುತ್ತಿದೆ.

5. ವೈಜ್ಞಾನಿಕವಾಗಿ ಹಾಗೂ ಪರಿಣಾಮಕಾರಿಯಾಗಿ ದುಂಡಾಣು ರೋಗವನ್ನು ನಿಯಂತ್ರಿಸುವುದಕ್ಕಾಗಿ ತರಬೇತಿ, ವಿಚಾರ ಸಂಕಿರಣ, ಕಾರ್ಯಗಾರ, ಪ್ರಾತ್ಯಕ್ಷಿಕೆಗಳನ್ನು ಆಯೋಜಿಸುವುದರೊಂದಿಗೆ, ಕರಪತ್ರಗಳನ್ನು ವಿತರಿಸಿ, ತಾಂತ್ರಿಕ ಮಾರ್ಗದರ್ಶನದ ಮೂಲಕ ದಾಳಿಂಬೆ ಬೆಳೆಗಾರರಿಗೆ ಇಲಾಖೆ ವತಿಯಿಂದ ಅರಿವು ಮೂಡಿಸಲಾಗುತ್ತಿದೆ.

ಈ) ಹೌದು.

ಉ) ಹೌದು.

ಊ) ವಿವರಗಳು ಮೇಲೆ 'ಇ' ನಲ್ಲಿರುವಂತೆ.

ನಾಲ್ಕು ಪಥಗಳ ರಸ್ತೆ ನಿರ್ಮಾಣ

512 (768) ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಷ್ಟ್ರೀಯ ಹೆದ್ದಾರಿ–13 ಮರಿಯಮ್ಮನಹಳ್ಳಿ ಕ್ರಾಸ್‌ನಿಂದ ಬೂದಿಗುಂಪ ಕ್ರಾಸ್‌ವರೆಗೆ ಮತ್ತು ರಾಷ್ಟ್ರೀಯ ಹೆದ್ದಾರಿ–63 ಸಿಮ್ಲಾ ರಾಸ್ ನಿಂದ ಬನಾಪುರ ಕ್ರಾಸ್‌ವರೆಗೆ ನಾಲ್ಕು ಪಥಗಳ ರಸ್ತೆಯನ್ನು ನಿರ್ಮಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ನಾಲ್ಕು ಪಥದ ರಸ್ತೆಗೆ ಭೂಮಿಯನ್ನು ಸ್ವಾಧೀನಪಡಿಸಿ ಕೊಳ್ಳಲಾಗಿದೆಯೇ;

ಇ) ಹಾಗಿದ್ದಲ್ಲಿ, ನಾಲ್ಕು ಪಥದ ರಸ್ತೆಯ ಕಾಮಗಾರಿಗಾಗಿ ಸರ್ಕಾರ ಅನುದಾನವನ್ನು ನಿಗದಿಪಡಿಸಿದೆಯೇ;

ಈ) ಹಾಗಿದ್ದಲ್ಲಿ, ನಾಲ್ಕು ಪಥದ ರಸ್ತೆಯ ಕಾಮಗಾರಿಯನ್ನು ಯಾವಾಗ ಪ್ರಾರಂಭ ಮಾಡಲಾಗುವುದು;

ಉ) ಈ ಎರಡು ರಸ್ತೆಗಳಲ್ಲಿ ಪ್ರತಿನಿತ್ಯ 8–10 ಸಾವಿರ ವಾಹನಗಳು ಸಂಚರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಊ) ಹಾಗಿದ್ದಲ್ಲಿ, ಈ ವಾಹನಗಳ ಸಂಚಾರದ ದಟ್ಟಣೆಯನ್ನು ಕಡಿಮೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಋ) ಈ ಎರಡು ರಸ್ತೆಗಳಲ್ಲಿ ವಾಹನಗಳ ದಟ್ಟಣೆಯಿಂದ ಪ್ರತಿನಿತ್ಯ ಹೆಚ್ಚಿನ ಸಂಖ್ಯೆಯಲ್ಲಿ ಅಪಘಾತಗಳು ಸಂಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಎ) ಹಾಗಿದ್ದಲ್ಲಿ, ಅಪಘಾತಗಳನ್ನು ತಪ್ಪಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?